**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ, ಬಂಗಾರಪೇಟೆ**

**ಸಿ.ಸಿ.ಸಂಖ್ಯೆಃ 2827/2022**

**ಪಿರ್ಯಾದುದಾರರುಃ-** ರಾಜ್ಯದ ಪರ ಬಂಗಾರಪೇಟೆ ಪೋಲೀಸರು

**ವಿರುದ್ಧ**

**ಆರೋಪಿಗಳುಃ-**
**1.** ವೇಣು ಅಲಿಯಾಸ್ ವೇಣುಪ್ರಕಾಶ್,
ಬಿನ್ ಗೋಪಾಲ್.ಆರ್., 24 ವರ್ಷ,
**2.** ಶಿವ, ಬಿನ್ ಗೋಪಾಲ್.ಆರ್, 21 ವರ್ಷ,
**3.** ಗೋಪಾಲಪ್ಪ.ಆರ್. ಅಲಿಯಾಸ್ ಗೋಪಾಲ್,
ಬಿನ್ ಲೇಟ್ ಮಜ್ಜಿಗೆ ರಾಮಣ್ಣ, 58 ವರ್ಷ,
ಎಲ್ಲರ ವಾಸಃ ಬೂದಿಕೋಟೆ ಗ್ರಾಮ,
ಬಂಗಾರಪೇಟೆ ತಾಲ್ಲುಕು.

**ದೋಷಾರೋಪಣೆ**

ಬಂಗಾರಪೇಟೆಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರಾದ ಶ್ರೀ ಬಿ. ಕೇಶವಮೂರ್ತಿ, ಬಿ.ಎಲ್.ಎಲ್.ಬಿ ಆದ ನಾನು ನಿಮ್ಮ ಮೇಲೆ ಈ ಕೆಳಗಿನಂತೆ ದೋಷಾರೋಪಣೆ ಹೊರಿಸುತ್ತೇನೆ.

ಚಾಸಾ-1 ರವರಿಗೆ ಸಂಬಂದಿಸಿದ ಬೂದಿಕೋಟೆ ಗ್ರಾಮದ ಜಮೀನಿನ ಸರ್ವೇ ನಂ.189/2 ರಲ್ಲಿ 22 ಗುಂಟೆ ಜಮೀನಿನ ವಿಚಾರದಲ್ಲಿ ಚಾಸಾ -1 ಮತ್ತು ಆರೋಪಿಗಳು ನ್ಯಾಯಾಲಯದಲ್ಲಿ ದೂರನ್ನು ಸಲ್ಲಿಸಿಕೊಂಡಿದ್ದು, ಸದರಿ ಜಮೀನಿನ ಬಳಿ ದಿನಾಂಕಃ 04.09.2022 ರಂದು ಬೆಳಿಗ್ಗೆ 8.00 ಗಂಟೆಯಲ್ಲಿ ಆರೋಪಿ 1 ಮತ್ತು 2 ರವರು ಟ್ರಾಕ್ಟರ್ ನಲ್ಲಿ ಕಲ್ಲುಗಳನ್ನು ತಂದು ಹಾಕಿ, ಚಾಸಾ-1 ರವರ ಮನೆಯ ಬಳಿ ಬಂದಾಗ ಚಾಸಾ-1 ರವರು ಆರೋಪಿ 1 ಮತ್ತು 2 ರವರನ್ನು ಕುರಿತು ಕೋರ್ಟ್ ಆದೇಶ ಮಾಡುವ ಮುಂಚೆ ಯಾಕೆ ಕಲ್ಲುಗಳನ್ನು ಹಾಕುತ್ತಿದ್ದೀಯಾ ಎಂದು ಕೇಳಿದ್ದಕ್ಕೆ ಆರೋಪಿಗಳಾದ ನೀವು ನೀನ್ಯಾವನೋ ಕೇಳೋಕೆ ನಿನ್ನಮ್ಮನೇ ಕ್ಯಾಯಾ ಎಂದು ಕೆಟ್ಟ ಮಾತುಗಳಿಂದ ಬೈದಿದ್ದು , ಈ ಪ್ರಕಾರ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 504 ಸಹಕಲಂ 34 ರ ರೀತ್ಯ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು. ಮತ್ತು

ಎರಡನೇಯದಾಗಿ, ಸದರಿ ದಿನಾಂಕ, ಸಮಯ ಮತ್ತು ಸ್ಥಳದಂದು ಮೇಲ್ಕಂಡ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ ಆರೋಪಿ 1 ಮತ್ತು 2 ರವರು ಚಾಸಾ-1 ರವರನ್ನು ಕೆಟ್ಟ ಮಾತುಗಳಿಂದ ಬೈದು, ಕೈಗಳಿಂದ ಮೈಮೇಲೆ, ಕುತ್ತಿಗೆ ಮೇಲೆ ಹೊಡೆದು ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿದ್ದು, ಅಷ್ಟರಲ್ಲಿ ಚಾಸಾ-2, 3 ಮತ್ತು 4 ರವರು ಬಂದಾಗ ಆರೋಪಿ 1 ಮತ್ತು 2 ರವರು ತಮ್ಮ ತಮ್ಮ ಕೈಗಳಿಂದ ಚಾಸಾ-3 ಮತ್ತು 4 ರವರಿಗೆ ಕೈಗಳಿಂದ ಹೊಡೆದು, ಆರೋಪಿ 2 ರವರು ತನ್ನ ಕೈಯಲ್ಲಿದ್ದ ಬಳೆಯಿಂದ ಚಾಸಾ-3 ರವರ ಎಡ ಕಣ್ಣಿನ ಬಳಿ ಹೊಡೆದು ಸಾಮಾನ್ಯ ಸ್ವರೂಪದ ಗಾಯ ಪಡಿಸಿದ್ದು, ಆರೋಪಿ 1 ಮತ್ತು 2 ರವರು ಚಾಸಾ-4 ರವರ ಬಲಗೈ ಮೇಲೆ, ಎದೆಯ ಮೇಲೆ ಕಾಲಿನಿಂದ ಒದ್ದು, ಕೈಗಳಿಂದ ಹೊಡೆದಿದ್ದು, ಆರೋಪಿ 3 ರವರು ಚಾಸಾ-2 ರವರ ತಲೆಯ ಹಿಂಬದಿಯ ಕುತ್ತಿಗೆ ಬಳಿ ಕೈಗಳಿಂದ ಹೊಡೆದು ಸಾಮಾನ್ಯ ಸ್ವರೂಪದ ನೋವುಂಟು ಮಾಡಿದ್ದು, ಈ ಪ್ರಕಾರ ಆರೋಪಿಗಳಾದ ನೀವು ಭಾರತ ದಂಡ ಸಂಹಿತೆ ಕಲಂ 323, 324 ಸಹಕಲಂ 34 ರ ರೀತ್ಯ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರೆಂದು ದೂಷಿಸಲಾಗಿದೆ.

(ಈ ಆಪಾದನೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗಳಿಗೆ ತಿಳಿದಿರುವ ಭಾಷೆಯಲ್ಲಿ ತಿಳಿಸಿ ಓದಿ ಹೇಳಿ ಕೇಳಲಾಗಿ ಆರೋಪಿಗಳು ನೀಡಿರುವ ಉತ್ತರಗಳನ್ನು ಪಡೆದುಕೊಂಡಿದ್ದು ಅವು ಸರಿ ಇವೆ ಎಂದು ದೃಢೀಕರಿಸಲಾಯಿತು)

**ದಿನಾಂಕ: 31.08.2023**

ಓ ಹೇ ಕೇ ಸರಿ ಇದೆ.

Sd/-

**(ಕೇಶವಮೂರ್ತಿ.ಬಿ )**
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ಬಂಗಾರಪೇಟೆ.